# Multi Disciplinary Research and New Trends

## Conference Proceedings

C.S. Bembalagi Arts, Sha.
M.R. Palaresha Science
&
G.L. Rathi Commerce Degree College

UGC Sponsored

National Conference

On

# Multi Disciplinary Research and New Trends

**28th March, 2019**

Organized by

**V.P.S"s**
**C.S.Bembalagi Arts, Sha.M.R.Palaresha Science & G.L.Rahi Commerce Degree College, Ramdurg-591123 District Belagavi Karnataka State**

# CONFERENCE PROCEEDINGS

**Published by**
V.P.S.CSB Arts, SMRP Science
& GLR Commerce Degree
College, Ramdurg

**ISBN** 9789389147117

**Publisher**
Principal
V.P.S.CSB Arts, SMRP Science
& GLR Commerce Degree
College, Ramdurg

**Editors**
Prof.S.M.Sakri
Prof.P.B.Teggihalli

**Principal**
V.P.S.CSB Arts, SMRP Science
& GLR Commerce Degree
College, Ramdurg
District Belagavi Karnataka State, India
Phone No.08335-242094
E-mail: principal_csb@yahoo.co.in Website:
www.vpsdegreecollegeramdurg.com

## Index


| Sl. No. | Name and Topic | Page No. |
|---|---|---|
| 1 | Key Note Address-**Prof.Dr.P.S.Kamable** | 10 |
| 2 | Kiran Desai's Hullabaloo in the Guava Orchard: A critique on Indian Society-**Prof.P.B.Teggihalli** | 14 |
| 3 | New Trends in Indian English Diasporic Literature-**Mr.P.S.Sidnal** | 19 |
| 4 | An overview on Feminist writes in Indian English Literature- **Mr.Vishwanath M.Aninapur** | 24 |
| 5 | The Theme of Exploitation in K.Shivaram Karanth's Choma's Drum-**Mr.Baburayanna Dhannur** | 28 |
| 6 | Feminism in Literature-**Miss Savita S.Wari** | 31 |
| 7 | Feminism in Literature-**Smt.Archana A.Kundaragimath** | 34 |
| 8 | Food as Signifying System in Urmila Pawar's Autobigraphy: The Weave of My life-**Smt.Manjula P.Kanavi** | 38 |
| 9 | Partition of 1947 in Indian English Literature-**M.H.Jogi** | 42 |
| 10 | Presentation Skills-Mr.S.N.Patil | 48 |
| 11 | Social Media and Recent Changes in English Language- **Bhimagouda Patil and Prasannasingh B.Hajeri** | 56 |
| 12 | The New Trends in Literature to present social life by autobiography as mirror to caste, gender and society-**Siddaglingappa Rangappagol** | 58 |
| 13 | ಭಾಷೆ ಮತ್ತು ಮಾಧ್ಯಮ–ಡಾ.ಎಫ್.ಡಿ.ಗಡ್ಡಿಗೌಡರ | 61 |
| 14 | ಗಣೇಶಯ್ಯನವರ ಕಥಾ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ–ಸಂಜಯಕುಮಾರ ಶಿ.ಹಾರೋಬಿಡಿ | 63 |
| 15 | ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ–ಡಾ.ಎಸ್.ಎಸ್.ಭಗವತಿ | 65 |
| 16 | ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ–ಅಶ್ವಿನಿ ಬಸವರಾಜ ಬಬಲಿ | 68 |
| 17 | ಸಾಹಿತ್ಯದಲ್ಲಿ ಮಹಿಳಾವಾದ–ಡಾ.ಸಣ್ಣವೀರಣ್ಣ ದೊಡ್ಡಮನಿ | 72 |
| 18 | ಸಾಹಿತ್ಯದಲ್ಲಿ ಸ್ತ್ರೀವಾದ–ರೋಹಿಣಿ.ಜೆ. | 74 |
| 19 | ಶಿಕ್ಷಣದ ಮಾದ್ಯಮವಾಗಿ ಭಾಷೆ–ಪರಸಪ್ಪ ತಳವಾರ | 78 |
| 20 | ಗ್ರಾಮೀಣ ಭಾಷಾ ಪ್ರಾದೇಶಿಕತೆ ಮತ್ತು ಸಮೂಹ ಮಾಧ್ಯಮಗಳು–ಡಾ.ತಿಪ್ಪೇಸ್ವಾಮಿ ಡಿ.ಎಸ್. | 81 |
| 21 | ಸಂಸ್ಕಾರದ ಕಾದಂಬರಿಯ ಚಂದ್ರಿ–ಕವಿತಾ ಜಂಗವಾಡ | 84 |
| 22 | गिलिगडु : वृध्द विमर्श के संदर्भ में–प्रो.वर्षाराणी जबडे, | 86 |
| 23 | नई सदी की लघु कविता–डा. उमेश ब गोलण्णवर | 91 |
| 24 | हिंदी कहानी-साहित्य में नारी विमर्श : „कायान्तर" के विशेष संदर्भ में -श्रीमती चतुरा सि नाइसाकोर्डेकर | 94 |
| 25 | हिंदीविज्ञापनोंकीभाषिकसंरचना:इलेक्ट्रॉनिकमीडियाकेसंदर्भमें-डॉ. विभालाड | 98 |
| 26 | Gandhijis Views on the Sanitation is Rural Development-**Dr.B.S.Kamble** | 102 |
| 27 | Gandhijis view on rurla Development-**Thippeswamy K.T.** | 107 |
| 28 | Growth and Challenges of Public Health infrastructure in north Karnataka region-**H.P.Paitl and Dr.Arjun Y.Pangannavar** | 110 |
| 29 | Waiving of Agriculture Loan: A Detail Study-**Mr.S.P.Halolli** | 117 |

| | | |
|---|---|---|
| 30 | ಪ್ರವಾಸೋದ್ಯಮ:ಸವಾಲುಗಳು ಮತ್ತು ಬದಲಾವಣೆಗಳು–ಪ್ರೊ.ಎಸ್.ಆರ್.ನಾಗಣ್ಣವರ | 122 |
| 31 | Agri Tourism in India-A way of Rural Development-**U.Chandramouli** | 132 |
| 32 | Tourism and Its Challenges-**Ravi Patil** | 136 |
| 33 | Tourism and Hospitality:Changes and Challenges-**Prof.Laxmibai Patil** | 140 |
| 34 | ಭಾರತದ ವಿದೇಶಾಂಗ ನೀತಿಯ ಹೊಸ ಆಯಾಮಗಳು–ಡಾ.ಶಿವಪುತ್ರ ಭಿ.ಗಗನಮಾಲಿ | 143 |
| 35 | New Dimensions of India's Foreign Policy-**Mr.Sumeet S.Mudalagi** | 146 |
| 36 | Indian Will be a Global Power in a Decade-**Dr.S.V.Kulkarni** | 152 |
| 37 | Creating Better world:Gandhiji's Vision and Perspectives-**Eshwarappa** | 158 |
| 38 | Socio-Economic Justice and Pnachyati Institutions-**Prof.S.R.Malagi** | 162 |
| 39 | Problems and Challenges of Aged Group-**Prof.S.I.Malagali** | 168 |
| 40 | A Study on old age women's Problem and Challenges in India-**Mr.Nagappa L.H.** | 173 |
| 41 | Problems and Challenges of Aged Group-Malini Revankar | 177 |
| 42 | Creating better world: Gandhiji's vision and Perspective-**Smt.Veena M.Dodamani** | 181 |
| 43 | Gandhian Approach to Rural Development-**Dr.Sunanda M.Madar** | 184 |
| 44 | A study on role of TiO2 Coated dye Sensitized solar cells for effluent Treatment: A Green Chemistry Approach-**Prathima Mathias D.A.** | 187 |
| 45 | India Needs the nuclear energy option: A Review Aspect-**Kumar Naik K.H.** | 191 |
| 46 | A Study on Ring Coupled Rectangular Microstrip Antenna with Stacking Technique-**Sri.Arunkumar.T.Tangoji** | 193 |
| 47 | Digital Lending: A New Saga of India-**Sri M.N.Bhajantri** | 199 |
| 48 | Basel-III Norms: Challenges and impact on Indian Banking systme-**Prof.Dyamappa S.Hadakar** | 204 |
| 49 | A Theortical Study of Banking Reforms in India-**Shaik khasimsha and Pottisriramulu Chalavadi Mallikharjuna Rao** | 208 |
| 50 | Banking Reforms in India-**Anupama** | 216 |
| 51 | Banking Reforma in India-**Fakiresh Jalihal** | 221 |
| 52 | Comprehensive Analysis of Success and Failure of GST (Since Implemention to December 2018)-**Prof.Virupakshi Patil Devermani** | 225 |
| 53 | Impact of GST on Small and Medium Enterprises-**Prof.Jayasheela.G** | 232 |
| 54 | Impact of GST on Real Estate-**Dr.Vijaylaxmi S.Dombar** | 236 |
| 55 | Impact of GST on Indian Economy-**Srinivasa.B** | 240 |
| 56 | Impact of I.T. in the Banking Sector in India-**Dr.Rajashekhar C.Koppad** | 248 |
| 57 | Impact of GST on Indian Economy-**Dr.Avinash Mahadev** | 253 |
| 58 | Mobile Banking A New Reform in the Banking Sector-**Dr.Nataraj B.Patted, Dr.Vivekanand A.Mane and Dr.Somanagouda I.Patil** | 257 |
| 59 | Reforms in Indian Banking Sector: an overview-**Dr.Prema Girimashetty** | 259 |
| 60 | Impact of GST on Indian Economy-**Chandarakant S.Arakeri and Anil I.Ramdurg** | 268 |
| 61 | Tax Reforms: -Effect of Goods and Services Tax Reforms on Revenue Collection in India-**Dr.Meenaxi S.Madiwalar** | 271 |

**Title-** Rural Linguistic Regionalism and Mass Media

- Dr. Thippeswamy D.S.

# ಗ್ರಾಮೀಣ ಭಾಷಾ ಪ್ರಾದೇಶಿಕತೆ ಮತ್ತು ಸಮೂಹ ಮಾಧ್ಯಮಗಳು

ಡಾ. ತಿಪ್ಪೇಸ್ವಾಮಿ ಡಿ.ಎಸ್
ಸಹಾಯಕ ಪ್ರಾಧ್ಯಾಪಕರು.
ವಿ.ಎಂ.ಎಸ್.ಆರ್. ವಸ್ತ್ರದ ಕಾಲೇಜ. ಹುನಗುಂದ

---

ಸಾಹಿತ್ಯ ಸಮಾಜದ ಕೈಗನ್ನಡಿ; ಭಾಷೆ ಅದರ ಸಾಧನ. ಯಾವುದೆ ಸಮಾಜದ ಆರ್ಥಿಕ. ಸಾಂಸ್ಕೃತಿಕ. ಧಾರ್ಮಿಕ ಮೊದಲಾದ ಜೀವನದ ವಿವಿಧ ರೂಪಗಳನ್ನು ಪ್ರತಿಬಿಂಬಿಸುವ ಕಾರ್ಯ ಸಾಹಿತ್ಯದಲ್ಲಿ ಭಾಷೆಯ ಮೂಲಕ ನಡೆಯುತ್ತದೆ. ಮಾತನಾಡುವ ಯಾವುದೇ ಭಾಷೆಯಲ್ಲಿ ಪ್ರಾದೇಶಿಕತೆಗೊಂದು ಶಕ್ತಿ ಇದೆ. ಧ್ವನಿ ಇದೆ. ಅರ್ಥವ್ಯಾಪ್ತಿ ಇರುತ್ತದೆ. ಇವುಗಳಿಂದ ಕೂಡಿದ ವೈವಿಧ್ಯತೆ ಭಾಷಾ ಶ್ರೀಮಂತಿಕೆಯ ಸಂಕೇತವಲ್ಲದ ಬೇರೆ ಇಲ್ಲ. ಆದರೆ ಬರಹದಲ್ಲಿ ಭಾಷೆ ಒಂದೆ ತೆರನಾಗಿರುವ ಸಾಧ್ಯತೆಯೇ ಹೆಚ್ಚು. ಅದು ಅವಶ್ಯವೂ ಅಹುದು. ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದರೂ ಅವು ಅಷ್ಟು ಗಮನಾರ್ಹವಲ್ಲ. ಉತ್ತರ ಭಾರತದ ಹಿಂದಿ ಭಾಷೆಯಲ್ಲಿ ಹಲವಾರು ಪ್ರಾದೇಶಿಕ ಭಾಷಾ ವ್ಯತ್ಯಾಸಗಳಿರುವುದನ್ನು ಇಲ್ಲಿ ಸ್ಮರಿಸಬಹುದು. ಅದರಂತೆ ಕರ್ನಾಟಕದಲ್ಲಿ ಮೈಸೂರು ಜಿಲ್ಲೆ ಗ್ರಾಮೀಣ ಭಾಷೆಗೂ. ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಭಾಷೆಗೂ ಪರಸ್ಪರರಿಗೆ ಅರ್ಥವಾಗದಷ್ಟು ಪ್ರಾದೇಶಿಕ ವ್ಯತ್ಯಾಸಗಳಿವೆ. ಅಭಿಮಾನದ ದೃಷ್ಟಿಯಿಂದ ತಮ್ಮ ತಮ್ಮ ಪ್ರಾದೇಶಿಕ ವೈಶಿಷ್ಟಗಳನ್ನು ಸಾಧು. ಸಮರ್ಥಕವೆಂದು ಹೇಳಿಕೊಳ್ಳವುದೂ ಉಂಟು.

ಈ ಪ್ರಾದೇಶಿಕ ಎದ್ದು ಕಾಣುವುದು ಬಳಕೆಯ ಶಬ್ದಗಳಲ್ಲಿ ಮತ್ತು ಉಚ್ಚಾರದ ರೀತಿಯಲ್ಲಿ ವ್ಯಕ್ತಿಗತವಾದ ಉಚ್ಚಾರದ ರೀತಿ ಬರಹದ ಭಾಷೆಗೆ ಸಂಬಂಧಪಡುವುದಿಲ್ಲ. ಆದರೆ ಭಾಷೆಯ ಅನಿವಾರ್ಯ ಅಂಗವಾಗಿ ಶಬ್ದಗಳು. ಆಡುಭಾಷೆಗೆ ಅರ್ಥ ಕೊಡುವುದರ ಜೊತೆಗೆ ಅದನ್ನು ಬರಹದಲ್ಲಿ ಸಾಕಾರಗೊಳಿಸುವಲ್ಲಿ ಮಹತ್ವದ ಪಾತ್ರವಾಗುತ್ತವೆ. ಈ ಶಬ್ದ ಸಂಗ್ರಹ ಒಂದು ಭಾಷೆಯ ಶ್ರೀಮಂತಿಕೆಯ ದ್ಯೋತಕವೂ ಅಹುದು. ಬರಹದ ಭಾಷೆ ಶ್ರೀಮಂತಿಕೆಗೆ ಪ್ರಾದೇಶಿಕವಾಗಿ ಚಲಾವಣೆಗೆ ಬಂದು ಶಬ್ದಗಳು ಬಹಳ ದೊಡ್ಡನಿಧಿ ಎನ್ನುವುದನ್ನು ಮರೆಯಲಾಗುವುದಿಲ್ಲ. ಒಂದು ಶಬ್ದಕ್ಕೆ ಶಬ್ದಕೋಶದ ಅರ್ಥ ಕೊಡಬಹುದಾದರೂ ಅದು ಆಯಾ ಪರಿಸರ ಪ್ರಾದೇಶಿಕತೆಗಳಲ್ಲಿ ಬಿಚ್ಚಿಕೊಳ್ಳುವ ಅರ್ಥವನ್ನು ಅನುಭವಿಸಿಯೇ ತಿಳಿಯಬೇಕು.

ಆಧುನಿಕ ಜಗತ್ತಿನಲ್ಲಿಯ ಸಂಪರ್ಕ ಮಾಧ್ಯಮಗಳಿಂದಾಗಿ ಒಂದು ಭಾಷೆಯ ಒಳಗಿರುವ ಪ್ರಾದೇಶಿಕ ವೈಶಿಷ್ಟ್ಯಗಳು ಕಡಿಮೆಯಾಗಿ ಪಟ್ಟಣದ ಭಾಷೆಯೊಂದು ರೂಢಿಗೆ ಬರಹತ್ತಿದೆ. ಆದರೆ ಗ್ರಾಮೀಣ ಭಾಷಾ ಪ್ರಯೋಗಗಳು ಕಡಿಮೆಯಾಗುತ್ತಾ ಬಂದು ಎಷ್ಟೋ ಶಬ್ದಗಳು ಚಲಾವಣೆಯ ಮೌಲ್ಯ ಕಳೆದುಕೊಂಡವು. ಭಾರತದ ಮಂತ್ರಿಗಳು ಹಿಂದಿಯ ಹೇರಿಕೆ ಯಾವ ಪ್ರತಿರೋಧವನ್ನು ಎದುರಿಸಿ. ತೀವ್ರತರವಾಗುತ್ತಿದೆ. ಇದಕ್ಕೆ ಕಾರಣ ಸೇನೆಯಲ್ಲಿ ರೇಡಿಯೋ. ಟಿವಿ ಮೊದಲಾದ ಶಕ್ತಿಯುತ ಪ್ರಸಾರ ಮಾಧ್ಯಮಗಳು ಕೇಂದ್ರ ಸರಕಾರದ ಸೊತ್ತಾಗಿರುವುದು. ಎಲ್ಲ ಪ್ರತಿ ಭವನಗಳೂ ಈ ಪ್ರಸಾರ ಮಾಧ್ಯಮಗಳೆದುರು ಅರಣ್ಯರೋಧನವಾಗಿರುವುದನ್ನು ಇಂದು ಎಲ್ಲ ಕಡೆ ಕುಡಿ ಚಾಚುತ್ತಿರುವ ಹಿಂದಿ ಭಾಷೆಯೇ ಹೇಳುತ್ತದೆ.

ಕನ್ನಡ ಭಾಷೆಯಲ್ಲಿ ಮೈಸೂರು. ಬೆಂಗಳೂರು ಮತ್ತು ಹೈದರಾಬಾದ್‌ಗಳಿಗೆ ಸೇರಿದ ಭಾಷಾ ಪ್ರಾದೇಶಿಕತೆಯ ವಲಯಗಳನ್ನು ಹೇಳಬಹುದು. ಈ ಮೂರು ವಲಯಗಳ ಪ್ರಾದೇಶಿಕ ಭಾಷಾ ವ್ಯತ್ಯಾಸಗಳು ಅಳಿದು ಸರ್ವ ಗ್ರಾಹಿಯಾಗಬಲ್ಲ ಬರಹದ ಭಾಷೆ ಈಗ ರೂಪುಗೊಂಡಿದ್ದರೂ ರಾಜಕೀಯ ಸೂತ್ರಗಳ ಕೇಂದ್ರವಾರ ಪ್ರದೇಶ ಸಮೂಹ ಮಾಧ್ಯಮಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ತನ್ನ ಭಾಷಾ ವೈಶಿಷ್ಟ್ಯಗಳನ್ನು ಉಳಿದೆರಡು ಭಾಷಾ ವಲಯಗಳ ಮೇಲೆ ಹೇರುತ್ತಿರುವುದನ್ನು ಎಷ್ಟು ಜನ ಗಮನಿಸಿದ್ದಾರೋ ಹೀಗಾಗಿ ಉಳಿದೆರಡು ಪ್ರದೇಶಗಳು ತಮ್ಮ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಳೆದುಕೊಳ್ಳುತ್ತಿರುವ ಗಂಡಾಂತರದಲ್ಲಿವೆ. ಮುಖ್ಯವಾಗಿ ಆಯಾ ಪ್ರದೇಶಗಳ ಶಬ್ದ ಸಂಪತ್ತನ್ನಾದರೂ ಭಾಷಾ ಶ್ರೀಮಂತಿಕೆಯ ದೃಷ್ಟಿಯಿಂದ ಉಳಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಸಾಂಸ್ಕೃತ ಪದಗಳನ್ನು ಸಾರ್ವಜನಿಕಗೊಳಿಸಲು ಸಮೂಹ ಮಾಧ್ಯಮಗಲ್ಲಿ ಅವುಗಳನ್ನು ಧಾರಾಳವಾಗಿ ಬಳಸಲಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಹಿಂದೀ ಪದಗಳನ್ನು ವಿಶೇಷವಾಗಿ ಸಮೂಹ ಮಾಧ್ಯಮದ ಮುಖಾಂತರ ಸಾರ್ವತ್ರಿಕವಾಗಿ ಹೇರುವ ಪ್ರಯತ್ನ ನಡೆಯುತ್ತಿದೆ. ಉದಾ :- ಜಾನುವಾರು. ದಾಸ್ತಾನು. ಫಸಲು. ಲೋಟಾ. ತಪಾಸಣೆ ದಾಖಲೆ ಮುಂತಾದವು ಈ ಶಬ್ದಗಳ ಬಳಕೆಯಿಂದ ಕನ್ನಡದ ಶಬ್ದಕೋಶ ಹಿಗ್ಗುವುದಾದರೆ ನಮ್ಮ ಅಭ್ಯಂತರವಿಲ್ಲ. ಆದರೆ ದನಕರು ಕಾಯಿಪಲ್ಲೆ ಮೊದಲಾದ ಅಚ್ಚಗನ್ನಡದ ಪದಗಳನ್ನು ಕಳೆದುಕೊಳ್ಳುತ್ತಿರುವ ಅಪಾಯಕ್ಕೆ ಚಿಂತಿಸಬೇಕಾಗಿದೆ. ಜಾನುವಾರು ಎಂದರೆ ಹುಲಿ. ಆನೆ ಯಾವುದೇ ಪ್ರಾಣಿಯಾಗಬಹುದು. ದನಕರು ಅಂದಾಗ ಎತ್ತು, ಎಮ್ಮೆ ಆಕಳುಗಳಂಥ ಸಾಕು ಪ್ರಾಣಿಗಳು ಮಾತ್ರ ಎಂದರ್ಥ.

ಪ್ರಾಥಮಿಕ, ಮಾಧ್ಯಮಿಕ ಪಠ್ಯಪುಸ್ತಕದಲ್ಲಿ ಬಳಸಲಾಗುತ್ತಿರುವ ಹಸು, ಎಮ್ಮೆ, ಮೇಕೆ, ಮೊಟ್ಟೆ, ಗದ್ದೆ ಮೊದಲಾದ ಪದಗಳ ಅರ್ಥವನ್ನು ಉತ್ತರ ಕರ್ನಾಟಕದ ಮಕ್ಕಳು ಅನುಕ್ರಮವಾಗಿ ಆಕಳು, ಅವ್ವ, ಆಡು, ತತ್ತಿ ಹೊಲ ಎಂದು ಬಾಯಿಪಾಠ ಮಾಡಬೇಕಾಗುತ್ತದೆ. ಅಚ್ಚುಗನ್ನಡ ಪದಗಳನ್ನು ಕಳೆದುಕೊಳ್ಳುವ ನೋವು ಅವರದು ಹಸು ಸಂಸ್ಕೃತ ಶಬ್ದ ಪಶುವಿನ ತದ್ಭವ 'ಪಶು' ಅಂದರೆ ನಾಲ್ಕು ಕಾಲಿನ ಪ್ರಾಣಿ ಮಾತ್ರ, ಸಂಸ್ಕೃತ ಗೋವಿನ ಅರ್ಥ ಅದೆಂದೂ ಕೊಡದು. ಹಾಗಿದ್ದಾಗ ಆಕಳು ಎನ್ನುವ ಅಚ್ಚುಗನ್ನಡ ಪದವನ್ನು ಬಿಟ್ಟು ಹಸುವನ್ನು ಬಳಸುವ ಔಚಿತ್ಯವನ್ನು ಪರಿಶೀಲಿಸಬೇಡವೆ ?

ಹೀಗಾಗಿ ಕೆಲವು ದಿನಗಳಲ್ಲಿ ಉತ್ತರ ಕರ್ನಾಟಕದ 'ಆಕಳು' ಸತ್ತು ಹೋವುವಲ್ಲಿ ಸಂಶಯವೇ ? ಇಲ್ಲಿ ಕನ್ನಡದ ಆಕಳನ್ನು ಕೊಂದು ಕನ್ನಡವಲ್ಲದ 'ಹಸು'ವನ್ನು ಉಳಿಸಿಕೊಳ್ಳುವಲ್ಲಿ ಏನು ಜಾಣ್ಮೆ ಇದೆ ? ಉತ್ತ ಕರ್ನಾಟಕದವರಿಗೆ 'ಹಸು' ಅಂದರೆ 'ಹಸಿವು' ಮಾತ್ರ ಅದರಂತೆ ಮೈಸೂರಿನ ಗದ್ದೆ ಉತ್ತರ ಕರ್ನಾಟಕದ 'ಹೊಲ' ಎಂದೂ ಸರಿಸಮಾನವಾದ ಪದ ಉತ್ತರ ಕರ್ನಾಟಕದಲ್ಲಿ ಗದ್ದೆ ಅಂದರೆ ಹುಲ್ಲಿನ ಗದ್ದೆ, ನೆಲ್ಲಿನ ಗದ್ದೆ, ಬತ್ತ ಬೆಳೆಯುವ ನಾಡಿನಲ್ಲಿ ಎಲ್ಲವೂ ಗದ್ದೆ, ಉತ್ತರ ಕರ್ನಾಟಕದಲ್ಲಿ ಜೋಳ, ಗೋಧಿ, ತೊಗರಿ, ಕಡಲೆ, ಸೆಂಗಾ ಬೆಳೆಯುವುದು. ಹೊಲ, ಕಬ್ಬು, ಬಾಳೆ, ಕಾಯಿಪಲ್ಲೆ ಬೆಳೆಯುವುದು ತೋಟ ಹೀಗೆ ಗದ್ದೆ ಹೊಲ ಮತ್ತು ತೋಟ ಬೇರೆ ಬೇರೆ ಪದಗಳಿರುವಾಗ ಅವೆಲ್ಲವುಗಳನ್ನು ಗದ್ದೆಯಲ್ಲಿ ಸಮಾವೇಶಗೊಳಿಸಿದರೆ ಕನ್ನಡಕ್ಕೆ ಅಪಕಾರ ಮಾಡಿದಂತಲ್ಲವೆ ? ಹೊಲ ತೋಟ ಶಬ್ದಗಳು ನಾಳಿನ ಮಕ್ಕಳಿಗೆ ಇಲ್ಲವಾಗುತ್ತವೆ. ಉತ್ತರ ಕರ್ನಾಟಕದವರು ಅವ್ವನನ್ನು ಮರೆತು ಮೈಸೂರು, ಚಿತ್ರದುರ್ಗ, ದಾವಣಗೇರಿನ ಅಮ್ಮನನ್ನು ಸ್ವೀಕರಿಸುವುದೆಂದರೆ ಹಡೆದವ್ವನನ್ನು ಬಿಟ್ಟು ಮಲವ್ವನನ್ನು ಸ್ವೀಕರಿಸಿದಂತೆಯೇ.

ಉತ್ತರ ಕರ್ನಾಟಕದ ಅಮ್ಮ ಗಂಡನನ್ನು ಕಳೆದುಕೊಂಡ ನಿರ್ಭಾಗ್ಯ ಸಮೂಹ ಮಾಧ್ಯಮಗಳಲ್ಲಿ ಕೋಳಿ ಮೊಟ್ಟೆ ಇದ್ದರೆ ಉತ್ತರ ಕರ್ನಾಟಕದ ಕೋಳಿ ತತ್ತಿ ಹಾಕುತ್ತದೆ. ಎರಡನ್ನ ಸಾದು ಪ್ರಯೋಗವೆಂದು ಸಮರ್ಥಿಸಿಕೊಂಡರೂ ಪರಸ್ಪರರಿಗೆ ಅರ್ಥವಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ತತ್ತಿಯನ್ನು ಕಳೆದುಕೊಂಡು ಮೊಟ್ಟೆ ಉಳಿಸಿಕೊಳ್ಳುವಲ್ಲಿ ಏನೂ ಅರ್ಥವಿಲ್ಲ. ನಾಳಿನ ಕನ್ನಡದ ವೈಶಿಷ್ಟ್ಯಗಳನ್ನು ರೂಢಿಸಿಕೊಂಡು ಕನ್ನಡಿಗರ ಉಸಿರಾಗಬೇಕು.

ಪ್ರದೇಶದ ಭಿನ್ನಭಿನ್ನ ಪದಗಳಾದ ಉಳ್ಳಾಗಡಡಿ, ಶೇಂಗಾಗಳಂಥ ಅಚ್ಚಗನ್ನಡ ಉತ್ತರ ಕರ್ನಾಟಕದ ಪದಗಳು ತಮ್ಮ ಖಾಕನ್ನು ಜಿಡ್ಡನ್ನೂ ಕಳೆದುಕೊಂಡು ಈರುಳ್ಳಿ ನೆಲಗಡಲೆಗಳಾಗಿ ಮಾಧ್ಯಮಗಳಲ್ಲಿ ಮನೆ ಮಾಡಿಕೊಂಡಿದ್ದು ಉತ್ತರ ಕರ್ನಾಟಕದ ಭಾಷಾ ಶಕ್ತಿಯನ್ನು ಕುಗ್ಗಿಸಹತ್ತಿದ್ದನನ್ನು ಬಹಳ ಜನ ಪಂಡಿತರು ಗಮನಿಸಿರಬಹುದು. ಒಮ್ಮೆ ರೇಡಿಯೋದಲ್ಲಿ ದಂಟಿನ ಪಲ್ಲೆ ಎನ್ನುವ ಪ್ರಯೋಗ ಏಳಿದ ಪ್ರಸಂಗವನ್ನು ವಿಚಾರ ಮಾಡಿದಾಗ ಮೈಸೂರಿನ ಕಡೆಯಲ್ಲಿ ವಿಚಾರಿಸಿದಾಗ ಅವರು ರಾಜಗಿರಿ ಪಲ್ಲೆ ತೋರಿಸಿದಾಗ ಬೆರಗಾಗಿ ಕಂಡ ಪ್ರಸಂಗವನ್ನು ಕಾಣುತ್ತೇವೆ.

ಕನ್ನಡ ಶಬ್ದಕೋಶಗಳಲ್ಲಿ ಅನ್ಯಭಾಷಾ ಶಬ್ದಗಳೂ ಬಂದು ಸೇರಲೇಬೇಕಾದ ಈ ಸಂದರ್ಭದಲ್ಲಿ ಅದೇ ಭಾಷೆಯ ಒಂದು ಪ್ರದೇಶದ ಶಬ್ದಗಳನ್ನು ನಾಶಮಾಡಿ ಒಂದು ಪ್ರದೇಶದ ಶಬ್ದಗಳನ್ನು ಸಾರ್ವತ್ರಿಕವಾಗುವಂತೆ ಹೇರುವುದು ಎಷ್ಟು ಔಚಿತ್ಯ ಪೂರ್ಣವಲ್ಲ. ಇದು ಇಡಿ ಕನ್ನಡ ಭಾಷೆಯನ್ನು ನಿಶ್ಶಕ್ತಗೊಳಿಸುವ ಕ್ರಮವಲ್ಲದೆ ಬೇರೆ ಅಲ್ಲ. ಬರಹ, ಭಾಷಣ, ಸಂಭಾಷಣೆ ಮತ್ತು ಅಧ್ಯಾಪನಗಳಲ್ಲಿ ಆಡಳಿತ ವಲಯ ತನ್ನ ಮಾಧ್ಯಮಗಳ ಮುಖಾಂತರ ಹೇರುವ ಭಾಷೆಯ ಅನುಕರಣೆ ಅಭಿಮಾನ ಶೂನ್ಯತೆಯ ಲಕ್ಷಣವೆನ್ನುವಲ್ಲಿ ಅರ್ಥವಿಲ್ಲ. ಆದರೆ ತಮ್ಮ ತನವನ್ನು ತಮ್ಮ ಪ್ರಾದೇಶಿಕ ಭಾಷಾ ವೈಶಿಷ್ಟ್ಯಗಳನ್ನು ಕಳೆದುಕೊಳ್ಳುತ್ತಿರುವ ಗಂಡಾಂತರವನ್ನು ಗಮನದಲ್ಲಿರಿಸಿಕೊಳ್ಳಬೇಕಾದ ಕರ್ತವ್ಯದ ಕಡೆ ಕಣ್ಣಿಡಬೇಕಾದುದು ಅಗತ್ಯ. ಅದಕ್ಕಾಗಿ ನಮ್ಮ ಭಾಷಾಭ್ಯಾಸಿಗಳು ಬರಿಯ ಮೇಲಾಧಿಕಾರಿಗಳ ಭಾಷೆಯ ಅನುಕರಣ ಶೀಲರಾಗಿರದೆ ನಮ್ಮ ಗ್ರಾಮೀಣ ಭಾಷೆಯ ಕಡೆಗೆ ಗಮನ ಹರಿಸಿದರೆ ಹೆಚ್ಚು ಪ್ರಯೋಜನವಾದೀತು ! ಕನ್ನಡವನ್ನು ಆಡಳಿತ ಭಾಷೆಯಾಗಿಸುವ ಅವಸರದಲ್ಲಿ ಸರಕಾರ ಪ್ರಾದೇಶಿಕ ಶಬ್ದಗಳಲ್ಲದ ಕನ್ನಡವನ್ನು ನಮ್ಮ ಮೇಲೆ ಹೇರದಂತೆ ಜಾಗೃತೆಯಿಂದಿದ್ದು ಪ್ರಾದೇಶಿಕ ಶಬ್ದಗಳು ಬಳಕೆಯಿಂದ ಹೊರಹೋಗದಂತೆ ನೋಡಿಕೊಳ್ಳುವುದು ಕನ್ನಡ ಭಾಷೆಯ ಕಲ್ಯಾಣ ದೃಷ್ಟಿಯಲ್ಲಿದೆ. ಪ್ರಾದೇಶಿಕತೆಯ ಸಂಕುಚಿತ ವಿಚಾರವಲ್ಲ.

ಒಂದು ಭಾಷೆ ತನ್ನೆಲ್ಲ ಪ್ರಾದೇಶಿಕ ವೈಶಿಷ್ಟ್ಯಗಳನ್ನು ತುಂಬಿಕೊಂಡು ಪುಷ್ಟವಾದಾಗಲೇ ಅದಕ್ಕೆ ಸರ್ವಗ್ರಾಹಿ ಶಿಷ್ಟ್ಯ ಭಾಷೆಯ ಪಟ್ಟ ಸಲ್ಲುತ್ತದೆ. ಪ್ರಾದೇಶಿಕ ಮತ್ತು ವೃತ್ತಿಪರ ಪದಗಳನ್ನು ಅದು ತನ್ನ ಹೊಟ್ಟೆಗೆ ಸೇರಿಸಿಕೊಳ್ಳಬೇಕು. ಸಮಗ್ರ ಕರ್ನಾಟಕದ ಆಡಳಿತ ಭಾಷೆ ಎಲ್ಲ ಕನ್ನಡಿಗರ ಭಾಷೆಯನ್ನೊಳಗೊಂಡು ಎಲ್ಲರಿಗೂ ಅರ್ಥವಾಗುವಂತಿರಬೇಕು. ಒಂದು ಪ್ರದೇಶದ ಭಾಷೆಯನ್ನು ಇನ್ನೊಂದು ಪ್ರದೇಶದವರ ಮೇಲೆ ಹೇರುತ್ತಿದ್ದಾರೆಂಬ ಭಾವ ಎಂದೂ ಬೆಳೆಯದಮತೆ ಎಚ್ಚರ ವಹಿಸಬೇಕಾಗಿದೆ. ಇಂಗ್ಲೀಷ ಪ್ರಿನ್ಸಿಪಾಲ ಪದ ಎಲ್ಲರಿಗೂ ಅರ್ಥವಾಗುತ್ತಿತ್ತು. ಆದರೆ ಅಭಿಮಾನಕ್ಕೆ ಕಟ್ಟು ಬಿದ್ದು ಸಂಸ್ಕೃತ ಪ್ರಾಚಾರ್ಯ ಪದವನ್ನು ರೂಢಿಗೆ ತರಲಾಯಿತು. ಅದು ಸರ್ವಗ್ರಾಹಿಯಾಗುವಷ್ಟರಲ್ಲೆ ಅದನ್ನು ಪ್ರಾಂಶುಪಾಲ ಎಂಬ ಇನ್ನೊಂದು ಸಂಸ್ಕೃತ ಶಬ್ದದಿಂದ ಬದಲಾಯಿಸುವ ಅವಶ್ಯಕತೆ ಏನಿತ್ತೋ ಪಂಡಿತರ ಈ ಅವಾಂತರಗಳು ಭಾಷೆಯನ್ನು ಗೊಂದಲಗೊಳಿಸುವಲ್ಲಿ ಸಂಶಯವಿಲ್ಲ. ಸಾಮಾನ್ಯರ ಉಚ್ಚಾರಕ್ಕೆ ಸಿಕ್ಕಿದ ಅರ್ಥಕ್ಕೆ ನಿಲುಕದ ಇಂಥ ಪದಗಳನ್ನು ಬಳಸುವುದರಿಂದ ಭಾಷೆಗೆ ಅಪಚಾರವೇ ಅಧಿಕ ಅದರಂತೆ

ಆರಕ್ಷಕ ಅಭಿಯಂತರ ಆಯುಕ್ತ ಮೊದಲಾದ ಪದಗಳನ್ನು ಬಳಸಿ ಕನ್ನಡವನ್ನು ಕಬ್ಬಿಣದ ಕಡಲೆಯಾಗಿಸುವ ವಿಧಾನವನ್ನು ಕೂಡಲೇ ನಿಲ್ಲಿಸುವ ಪೋಲಿಸ್ ಇಂಜಿನಿಯರ ಮೊದಲಾದ ಪದಗಳನ್ನು ಬಳಸಿದರೆ ಸಂಪರ್ಕ ಮತ್ತು ಸರ್ವಗ್ರಾಹಿ ಅರ್ಥ ಸಾಮಾನ್ಯರಿಗೆ ಸಿಗಬಲ್ಲದು.


ಗ್ರಂಥ ಋಣ :-

1) ಬರಗೂರು ರಾಮಚಂದ್ರಪ್ಪ : ಸಂಸ್ಕೃತಿ ಮತ್ತು ಸೃಜಾನಶೀಲತೆ
2) ಕೃಷ್ಣಮೂರ್ತಿ : ಭಾರತೀಯ ಪತ್ರಿಕೋಧ್ಯಮ
3) ಸಿ.ಬಿ. ರಾಜಗೋಪಾಲ : ದೂರದರ್ಶನ
4) ಬಸವರಾಜ ಸಬರದ : ಸಾಹಿತ್ಯ ಸಮೂಹ ಮಾದ್ಯಮ
5) ಎಸ್.ಕೆ. ಲೋಹದ್ : ಕರ್ನಾಟಕ ಜಾನಪದ

This eventually edited 'Conference Proceeding' entitled "Multidisciplinary Research and New Trends" is an offspring of the culmination of thoughts, ideas and views of various eminent scholars and academicians on the relevant issues and new developments in various walks of life. The research culture has revolutionized the field of education. It has laid its influence on all walks of human life and has brought about a dramatic transformation. At present scenario, it has been realized by all academicians that there is a need to adopt an advanced pedagogy in teaching their respective subjects. In this respect, our teachers of various disciplines at different levels and academicians have conformed to this necessity, legitimacy and accountability to improve the quality of education.

Editors: S.M. Sakri and P.B. Teggihalli

Pothi

9 789389 147117